# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 1996-97ನೇ ಸಾಲಿನ ಆಯವ್ಯಯದಲ್ಲಿ ಗಲಭೆಗಳಿಂದ ತೊಂದರೆಗೊಳಗಾದವರಿಗೆ ಪರಿಹಾರಧನ ನೀಡುವ ಬಗ್ಗೆ - ಅನುದಾನ ಬಿಡುಗಡೆ ಕುರಿತು

ಉಲ್ಲೇಖ:- 1) ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ:75 ಎಸ್‌ಎಸ್‌ಟಿ 93, ದಿನಾಂಕ:2-3-1993
2) ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ:811 ಎಸ್‌ಎಸ್‌ಟಿ 92, ದಿನಾಂಕ:22-10-94
3) ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ:78 ಸಿಆರ್‌ಆರ್ 95, ದಿನಾಂಕ:28-8-95 ಹಾಗೂ 11-12-95

ಪೀಠಿಕೆ :- 1) ಉಲ್ಲೇಖಿತ ಆದೇಶಗಳನ್ವಯ, ಮತೀಯ ಗಲಭೆಗಳಲ್ಲಿ, ನಾಗರೀಕ ಗಲಭೆಗಳಲ್ಲಿ ಹಾಗೂ ಒಂದೇ ಧರ್ಮದ ವಿವಿಧ ಕೋಮುಗಳ ನಡುವಿನ ಗಲಭೆಗಳಲ್ಲಿ ಮೃತಪಟ್ಟ, ಗಾಯಗೊಂಡ, ಆಸ್ತಿ- ಪಾಸ್ತಿ ನಷ್ಟ ಅನುಭವಿಸಿದವರಿಗೆ ಪರಿಹಾರ ಮಂಜೂರು ಮಾಡಲು ಪರಿಹಾರದ ಮೊತ್ತವನ್ನು ನಿಗದಿಗೊಳಿಸಿ, ಪರಿಹಾರವನ್ನು ಮಂಜೂರು ಮಾಡುವ ಪೂರ್ಣ ಅಧಿಕಾರವನ್ನು ಅನುಕ್ರಮವಾಗಿ ಆಯಾಯಾ ಜಿಲ್ಲಾಧಿಕಾರಿಗಳು ಹಾಗೂ ವಿಭಾಗಾಧಿಕಾರಿಗಳಿಗೆ ನೀಡಿದೆ, ಹಾಗೂ ಮತೀಯ ಗಲಭೆಗಳಿಂದ ಹಾನಿಗೀಡಾದ ಅಥವಾ ನೆಲಸಮ ಹೊಂದಿದ ಪೂಜಾ ಸ್ಥಳಗಳನ್ನು ದುರಸ್ತಿಗೊಳಿಸುವ [illegible] ಅಥವಾ ಸದರಿ ಪೂಜಾಸ್ಥಳಗಳನ್ನು (ಕಟ್ಟಡಗಳು) ಮೊದಲಿದ್ದಂತೆ ನಿರ್ಮಿಸುವ ಕುರಿತು, ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆಯೂ ಆಯಾಯಾ ಜಿಲ್ಲಾಧಿಕಾರಿಗಳು, ವಿಭಾಗಾಧಿಕಾರಿಗಳಿಗೆ ನಿರ್ದೇಶನಗಳನ್ನು ನೀಡಲಾಗಿದೆ.

ಇಂಥಹ ಗಲಭೆಗಳಲ್ಲಿ ಸಾವು — ನೋವು ಅನುಭವಿಸಿದವರಿಗೆ, ಆಸ್ತಿ -ಪಾಸ್ತಿ, ನಷ್ಟ ಹೊಂದಿದವರಿಗೆ ಪರಿಹಾರ ಮಂಜೂರು ಮಾಡುವ ಹಾಗೂ ಹಾನಿಗೊಳಗಾದ ಪೂಜಾ ಸ್ಥಳಗಳನ್ನು ದುರಸ್ತಿ, ಪುನರ್ ನಿರ್ಮಾಣ ಮಾಡುವ ಕೆಲಸಗಳು ತುಂಬಾ ತುರ್ತಿನವು, ತೀರಾ ಅಗತ್ಯವಾದವುಗಳೂ ಆಗಿರುವುದರಿಂದ ಹಾಗೂ ಮಾನವೀಯ ಅನುಕಂಪದ ಮೇರೆಗೆ ತತ್‌ಕ್ಷಣ ಪುನರ್ವಸತಿ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಆದ್ದರಿಂದ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಹಣಕಾಸಿನ ಅವಕಾಶದಿಂದ ಹಣ ಬಿಡುಗಡೆಗಾಗಿ ಆಯಾಯಾ ಜಿಲ್ಲಾಧಿಕಾರಿಗಳಿಂದ ಬಂದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಮಂಜೂರು ನೀಡಿ ಹಣ ಬಿಡುಗಡೆ ಮಾಡುವ ಪೂರ್ಣ ಅಧಿಕಾರವನ್ನು, ರಾಜ್ಯದಲ್ಲಿರುವ ಎಲ್ಲಾ ವಿಭಾಗಾಧಿಕಾರಿಗಳಿಗೆ ನೀಡಿದೆ. ಆಡಳಿತಾತ್ಮಕ ತೊಡಕುಗಳನ್ನು ನಿವಾರಿಸುವ ಹಾಗೂ ಪರಿಹಾರ ಮತ್ತು ಪುನರ್ವಸತಿ ಕಾರ್ಯಗಳ[illegible] ವಿಳಂಬಕ್ಕೆ ಅವಕಾಶ ನೀಡದೇ ತ್ವರಿತವಾಗಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಅನುಕೂಲವಾಗುವಂತೆ ಸರ್ಕಾರ ಉಲ್ಲೇಖ(3)ರಂತೆ ಅಧಿಕಾರ ಪ್ರತ್ಯಾಯೋಜಿಸಿ ಆದೇಶವನ್ನು ಹೊರಡಿಸಿದೆ. ಸಂತ್ರಸ್ತರ ಪರಿಹಾರ, ಪುನರ್ವಸತಿಗಾಗಿ ಅವಶ್ಯ ಅನುದಾನ ಬಿಡುಗಡೆ ಮಾಡಲು ನಿರ್ಧರಿಸಿ, ಈ ಕೆಳಗಿನ ಆದೇಶ.

## ಸರ್ಕಾರಿ ಆದೇಶ ಸಂಖ್ಯೆ:ಹೆಚ್‌ಡಿ:62 ಸಿಆರ್‌ಆರ್ 96 ಬೆಂಗಳೂರು, ದಿನಾಂಕ: 12-4-96

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭಗಳಲ್ಲಿ, ಗಲಭೆಗಳಲ್ಲಿ ಸಾವು — ನೋವು ಅನುಭವಿಸಿದವರಿಗೆ ಆಸ್ತಿ -ಪಾಸ್ತಿ ನಷ್ಟ ಹೊಂದಿದವರಿಗೆ ಪರಿಹಾರ ಮಂಜೂರು ಮಾಡುವ ಹಾಗೂ ಹಾನಿಗೊಳಗಾದವರಿಗೆ ಪೂಜಾ ಸ್ಥಳಗಳನ್ನು ದುರಸ್ತಿ : ಪುನರ್ ನಿರ್ಮಾಣ ಮಾಡುವ ಕೆಲಸಗಳು ತ್ವರಿತವಾಗಿ ಆಗುವಂತೆ ಮಾಡಲು ಹಾಗೂ ಆಡಳಿತಾತ್ಮಕ ತೊಡಕುಗಳನ್ನು ನಿವಾರಿಸಲು ರಾಜ್ಯದಲ್ಲಿರುವ ನಾಲ್ಕು ವಿಭಾಗಾಧಿಕಾರಿಗಳಾದ ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಗುಲ್ಬರ್ಗಾ ವಿಭಾಗಗಳ ವಿಭಾಗಾಧಿಕಾರಿಗಳಿಗೆ ಪ್ರಸಕ್ತ ಆರ್ಥಿಕ ವರ್ಷ 1996-97ನೇ ಸಾಲಿನಲ್ಲಿ ಆಯವ್ಯಯ ಅಂದಾಜಿನ ಲೆಕ್ಕ ಶೀರ್ಷಿಕೆ "2235- ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ -60-ಇತರೇ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಕಾರ್ಯಕ್ರಮಗಳು-200-ಇತರ ಕಾರ್ಯಕ್ರಮಗಳು-3- ಗಲಭೆಗಳಿಂದ ತೊಂದರೆಗೊಳಗಾದವರಿಗೆ ಪರಿಹಾರ-01 ಸಾಮಾನ್ಯ ಪರಿಹಾರ (ಯೋಜನೇತರ) 2235-60-200-3-01 (ಯೋಜನೇತರ)" ರ ಅಡಿಯಲ್ಲಿ ಒದಗಿಸಿರುವ ಹಣದಿಂದ ಅನುಕ್ರಮವಾಗಿ ತಲಾ ರೂ.25 ಲಕ್ಷ ರೂಪಾಯಿಗಳನ್ನು (ಇಪ್ಪತ್ತೈದು ಲಕ್ಷ ರೂಪಾಯಿಗಳು ಮಾತ್ರ)

.....2

ಬಿಡುಗಡೆ ಮಾಡಿ ಹಂಚಿಕೆ ಮಾಡಲು ಸರ್ಕಾರ ಮಂಜೂರಾತಿ ನೀಡಿದೆ.

ಅ) ಹಂಚಿಕೆ ಮಾಡಲಾದ ರೂ 25 ಲಕ್ಷಗಳನ್ನು ಅಗತ್ಯಕ್ಕೆ ಅನುಗುಣವಾಗಿ ತಮ್ಮ ನಿಯಂತ್ರಣಕ್ಕೊಳಪಡುವ ಜಿಲ್ಲಾಧಿಕಾರಿಗಳಿಂದ ಬಂದ ಬೇಡಿಕೆಗಳನ್ನು ಪರಿಶೀಲಿಸಿ, ಸಂಬಂಧಪಟ್ಟ ವಿಭಾಗಾಧಿಕಾರಿಯವರು ಹಣವನ್ನು ಹಂಚಿಕೆಯಾಗಿರುವ ಹಣದಿಂದ ಮಂಜೂರಾತಿ ನೀಡಿ, ಬಿಡುಗಡೆ ಮಾಡಲು ವಿಭಾಗಾಧಿಕಾರಿಗಳಿಗೆ ಪೂರ್ಣ ಅಧಿಕಾರ ನೀಡಲಾಗಿದೆ.

ಆ) ಸಂಬಂಧಪಟ್ಟ ವಿಭಾಗಾಧಿಕಾರಿಗಳು ತಮ್ಮ ನಿಯಂತ್ರಣಕ್ಕೊಳಪಡುವ ಜಿಲ್ಲಾಧಿಕಾರಿಗಳು ಗಳಿಗೆಗಳಿಗೆ ಸಂಬಂಧಿಸಿದಂತೆ ಪರಿಹಾರ ಮಂಜೂರಾತಿ, ಕಟ್ಟಡ ದುರಸ್ತಿ : ಪುನರ್ ನಿರ್ಮಾಣ ಮುಂತಾದ ಕಾರ್ಯಕ್ರಮಗಳಿಗೆ ಎಷ್ಟು ಪ್ರಮಾಣದ ಖರ್ಚನ್ನು ಭರಿಸಲಾಗಿದೆ ಎಂಬ ಬಗ್ಗೆ ಲೆಕ್ಕ ಪತ್ರ ದಾಖಲೆಗಳನ್ನು ಇಡುವುದು.

ಇ) ಪ್ರತಿ ವಿಭಾಗಾಧಿಕಾರಿಯವರೂ ಸರ್ಕಾರದಿಂದ ಬಿಡುಗಡೆ ಮಾಡಲಾದ ಹಂಚಿಕೆ ಮಾಡಲಾದ ರೂ.25 ಲಕ್ಷಗಳಲ್ಲಿ ಸದರಿ ವಿಭಾಗದಲ್ಲಿ ಎಷ್ಟು ಹಣವನ್ನು ಜಿಲ್ಲಾಧಿಕಾರಿಗಳು ವಿನಿಯೋಗಿಸಿದ್ದಾರೆ ಹಾಗೂ ಎಷ್ಟು ಪ್ರಮಾಣದ ಹಣ ಉಳಿದಿದೆ ಎಂಬ ಬಗ್ಗೆ ವಿವರವಾದ ವರದಿಗಳನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಸರ್ಕಾರಕ್ಕೆ ಒಪ್ಪಿಸುವುದು.

ಈ) ಜಿಲ್ಲಾಧಿಕಾರಿಗಳು ತಮಗೆ ವಿಭಾಗಾಧಿಕಾರಿಗಳಿಂದ ಹಂಚಿಕೆಯಾದ ಅನುದಾನವನ್ನು ವಿತರಣೆ ಮಾಡಲು ಮಾತ್ರ ಖಜಾನೆಯಿಂದ ಹಣ ಪಡೆಯಬಹುದು. ಅನುದಾನವನ್ನು ತೆಗೆದು ವೈಯಕ್ತಿಕ ಠೇವಣಿ ಖಾತೆಗೆ ಜಮಾ ಮಾಡತಕ್ಕದ್ದಲ್ಲ. ಆರ್ಥಿಕ ವರ್ಷದ ಕೊನೆಯಲ್ಲಿ ಉಳಿದ ಅನುದಾನವನ್ನು ವಿಭಾಗಾಧಿಕಾರಿಗಳ ಮೂಲಕ ಅಧ್ಯರ್ಪಣೆ ಮಾಡುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ. ರಾಮಸ್ವಾಮಿ)
ಸರ್ಕಾರದ ಉಪ ಕಾರ್ಯದರ್ಶಿ (ಕಂ. ಮತ್ತು ಸಂ)
ಒಳಾಡಳಿತ ಮತ್ತು ಸಾರಿಗೆ ಇಲಾಖೆ

15/446

19-4-81

<u>ಇವರಿಗೆ</u> :

1) ರಾಜ್ಯದ ಎಲ್ಲಾ ವಿಭಾಗಗಳ ವಿಭಾಗಾಧಿಕಾರಿಗಳಿಗೆ
2) ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ
3) ಮಹಾಲೇಖಪಾಲರು, ಕರ್ನಾಟಕ ರಾಜ್ಯ, ಬೆಂಗಳೂರು
4) ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
5) ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
6) ಮುಖ್ಯ ಮಂತ್ರಿಗಳ ಕಾರ್ಯದರ್ಶಿಗಳಿಗೆ
7) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–5), ವಿಧಾನಸೌಧ, ಬೆಂಗಳೂರು
8) ರಕ್ಷಾ ಕಡತಕ್ಕೆ
9) ಹೆಚ್ಚುವರಿ ಪ್ರತಿಗಳು

ಜಿಟಿಜಿ ಕ್ರಿ